**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸ ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯ ಹಂತ-2ರ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:** ದಿನಾಂಕ:29.09.2021ರಂದು ನಡೆದ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳ Variations & EOT ಮಂಜೂರು ಮಾಡುವ ಕುರಿತು ನಡೆದ ಸಭೆಯ ನಡವಳಿಗಳು.

---

**ಪೀಠಿಕೆ:**

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸ ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/101/ಗ್ರಾನೀಸ(2)/2007 ದಿನಾಂಕ:14.08.2007ರಲ್ಲಿ ರೂ.260.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆ ಕಾಮಗಾರಿಯ ಟೆಂಡರ್ ಐಟಂಗಳ ಪರಿಮಾಣಗಳಿಗಿಂತ ಹೆಚ್ಚುವರಿಯಾಗಿ ಹಾಗೂ ಟೆಂಡರ್‌ನಲ್ಲಿ ಇಲ್ಲದಿರುವ ಹೊಸ ಐಟಂಗಳನ್ನು ಸೇರ್ಪಡೆಗೊಳಿಸಿ ಅನುಷ್ಠಾನಗೊಳಿಸಿರುವುದರಿಂದ ಅಂದಾಜು ಮೊತ್ತವು ಪರಿಷ್ಕೃತಗೊಂಡಿದೆ.

ಈ ಕುರಿತು ದಿನಾಂಕ:29.09.2021ರಂದು ನಡೆದ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳ Variations & EOT ಮಂಜೂರು ಮಾಡುವ ಕುರಿತು ನಡೆದ ಸಭೆಯ ನಿರ್ಣಯದಂತೆ ಈ ಯೋಜನೆಯ ಹಂತ-2ರ ಕಾಮಗಾರಿಯ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಣಯಿಸಲಾಗಿದೆ.

ಚಾಲ್ತಿ ಪಾರದರ್ಶಕ ನೀತಿಯನ್ವಯ, ನಿಯಮಾನುಸಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, **ಚಿಕ್ಕಮಗಳೂರು** ಹಾಗೂ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಸದರಿ ಕಾಮಗಾರಿಗೆ **2215-ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ (2215-MVS)** ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ:ಗ್ರಾಕುನೀ&ನೈಇ/309/ಗ್ರಾನೀಸ(4)/2021 ಬೆಂಗಳೂರು, ದಿನಾಂಕ:06.12.2021** 1005

ಪೀಠಿಕೆಯಲ್ಲಿನ ಅಂಶಗಳ ಹಿನ್ನೆಲೆಯಲ್ಲಿ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸ ಗ್ರಾಮದ ಕುಡಿಯುವ ನೀರು ಸರಬರಾಜು ಯೋಜನೆಯ ಹಂತ-2ರ ಕಾಮಗಾರಿಯ ಒಟ್ಟು ಪರಿಷ್ಕೃತ ಅಂದಾಜು ಮೊತ್ತ **ರೂ.379.29ಲಕ್ಷ (ಮುನ್ನೂರ ಎಪ್ಪತ್ತೊಂಭತ್ತು ಲಕ್ಷದ ಇಪ್ಪತ್ತೆರಡು ಸಾವಿರ ರೂಪಾಯಿಗಳು ಮಾತ್ರ)ಗಳಿಗೆ 2215-ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ (2215-MVS)** ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

**2. ಈ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ:-**

(ಅ) ಈ ಅನುಮೋದಿತ ಕುಡಿಯುವ ನೀರಿನ ಕಾರ್ಯಕ್ರಮದ ವ್ಯಾಪ್ತಿಗೆ ಬರುವ ಗ್ರಾಮ/ಜನವಸತಿಗಳು ಮತ್ತ್ಯಾವುದೇ ಯೋಜನೆಗಳಡಿ ಸೇರ್ಪಡೆಯಾಗಿರಬಾರದು.

(ಆ) ಗುತ್ತಿಗೆದಾರರು ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿ ಮತ್ತು ನಿಗದಿತ ಅವಧಿಯೊಳಗೆ ಕಾರ್ಯಗತಗೊಳಿಸಿ ಪೂರ್ಣಗೊಳಿಸಬೇಕು. ತದನಂತರ 5 ವರ್ಷಗಳ ಕಾಲ ಸದರಿ ಯೋಜನೆಗಳ ಸಂಪೂರ್ಣ ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು (O&M) ಸದರಿ ಸಂಸ್ಥೆಯೇ ನಿರ್ವಹಿಸತಕ್ಕದ್ದು.

(ಇ) ಈ ಆದೇಶದಡಿ ಅನುಮೋದನೆಯಾದ ಯೋಜನೆಗಳಿಗೆ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಮುಖ್ಯ ಅಭಿಯಂತರರು, ಗ್ರಾ.ಕು.ನೀ.&ನೈ ಇಲಾಖೆರವರಿಂದ ದೃಢೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ, ಪ್ರಗತಿ ಆಧರಿಸಿ, ಅನುದಾನ ಬಿಡುಗಡೆಯಾಗಲಿದೆ. 2021-22ರ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

(ಈ) ಈ ಯೋಜನೆಗಳ ಅನುಷ್ಠಾನವನ್ನು ಚಾಲ್ತಿ ಪಾರದರ್ಶಕ (KTPP ಅಧಿನಿಯಮ) ನೀತಿಯನ್ವಯ ಮಾಡತಕ್ಕದ್ದು ಮತ್ತು ಯೋಜನೆಗಳ ಕಾರ್ಯಕ್ಷಮತೆ / ಅನುಷ್ಠಾನವನ್ನು ಕಡ್ಡಾಯವಾಗಿ ಸರ್ಕಾರದಿಂದ ಅನುಮೋದನೆಯಾಗಿರುವ ಸಂಸ್ಥೆಯ ಮೂಲಕ 3rd Party Inspection ಗೆ ಒಳಪಡಿಸತಕ್ಕದ್ದು.

(ಉ) Bulk Water meter ಹಾಗೂ Household metering ವ್ಯವಸ್ಥೆಯನ್ನು MVS ಯೋಜನೆಗಳಿರುವೆಡೆ ಕಡ್ಡಾಯವಾಗಿ ಮಾಡತಕ್ಕದ್ದು. ಆಯಾ ಗ್ರಾಮ ಪಂಚಾಯತಿ ಸರದಿ ಆಧಾರದ ಮೇಲೆ ಹೊರಗುತ್ತಿಗೆ ಸಂಸ್ಥೆಗೆ / ಸರ್ಕಾರಕ್ಕೆ ನೀರು ಬಳಕೆ ಆಧಾರದ ಮೇಲೆ ನೀರಿನ ಕರ ಪಾವತಿಸತಕ್ಕದ್ದು.

(ಊ) ಯೋಜನೆಯು ಅನುಷ್ಠಾನಗೊಂಡು ಗುತ್ತಿಗೆದಾರರ 5 ವರ್ಷಗಳ O&M ನಿರ್ವಹಣಾ ಅವಧಿ ಮುಗಿದ ನಂತರ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾಡಿಸತಕ್ಕದ್ದು. ಹಾಗೂ ಗ್ರಾಮಗಳ ಆಂತರಿಕ ಸರಬರಾಜು ವ್ಯವಸ್ಥೆಯನ್ನು ಸಂಬಂಧಿಸಿದ ಗ್ರಾಮ ಪಂಚಾಯತ್ ಮುಖೇನ ನಡೆಸಲು ಗ್ರಾಮ ಪಂಚಾಯತ್ ಠರಾವು ಆಧರಿಸಿ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು.

(ಋ) ಸರ್ಕಾರದ ನೀತಿಯನ್ವಯ ಮನೆ ಸಂಪರ್ಕ ಮತ್ತು ಸ್ಟ್ಯಾಂಡ್ ಪೋಸ್ಟ್‌ಗಳಿಗೆ ಕಲ್ಪಿಸಿರುವ ಸಂಪರ್ಕದನ್ವಯ ನಿರ್ವಹಣೆ ವೆಚ್ಚಕ್ಕನುಗುಣವಾಗಿ ಅಗತ್ಯ ನೀರಿನ ಶುಲ್ಕ ಸಂಗ್ರಹಿಸತಕ್ಕದ್ದು ಹಾಗೂ ಮನೆ ಸಂಪರ್ಕಕ್ಕೆ ನೀರಿನ ಠೇವಣಿಯನ್ನು ಗ್ರಾಮ ಪಂಚಾಯತ್ ಠರಾವಿನನ್ವಯ ಸಂಗ್ರಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ (ಅಭಿವೃದ್ಧಿ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ –AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–I – G&SSA- AUDIT) ಕರ್ನಾಟಕ, ಬೆಂಗಳೂರು.
3. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ಚಿಕ್ಕಮಗಳೂರು**.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ. & ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಆಯುಕ್ತರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.

7. ಮುಖ್ಯ ಅಭಿಯಂತರರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
8. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
9. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ಚಿಕ್ಕಮಗಳೂರು.**
10. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ ಕಛೇರಿ, **ಮೈಸೂರು.**
11. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. & ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ. & ಪಂ.ರಾಜ್ ಇಲಾಖೆ, ಬೆಂಗಳೂರು.
13. ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
14. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, **ಚಿಕ್ಕಮಗಳೂರು.**
15. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ. & ಪಂ.ರಾಜ್ ಇಲಾಖೆ, (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು) ಬೆಂಗಳೂರು.
16. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ) ಬೆಂಗಳೂರು.
17. ಗ್ರಾ.ಅ. & ಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು) ಬೆಂಗಳೂರು.
18. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.